## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ
## ಎಸ್.ಸಿ. ಸಂಖ್ಯೆ 173/2019

ಫ್ರಾಸಾ .05

ಚಾಸಾ. 10

| | | |
|---|---|---|
| ಸಾಕ್ಷಿಯ ಹೆಸರು | : | ಉಮೇಶ ಹಳಕಟ್ಟಿ |
| ತಂದೆ ಹೆಸರು | : | ಶಿವಪ್ಪ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಗೌಂಡಿ ಕೆಲಸ |
| ವಾಸಸ್ಥಳ | : | ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | : | 15-04-2024 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ದಿಃ 2-8-2019 ರಂದು ನನ್ನನ್ನು ಮತ್ತು ಚಾಸಾ-11 ಸತೀಶ ಪಾಟೀಲ ರವರನ್ನು ಕೊಲೆ ಪ್ರಕರಣದ ಪಂಚನಾಮೆಗೆ ಸಂಬಂಧಿಸಿದಂತೆ ಸಬ ಅರ್ಬನ ಪೊಲೀಸರು ಠಾಣೆಗೆ ಕರೆಸಿದ್ದರು . ನಾನು ಮತ್ತು ನನ್ನ ಸ್ನೆಹಿತ ಠಾಣೆಗೆ ಹೋದಾಗ ಠಾಣೆಯಲ್ಲಿ ಆರೋಪಿ ಮಲ್ಲೇಶಿ ಇದ್ದನು. ಆತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಮಲ್ಲೇಶಿ ತಾನು ಘಟನೆ ಕಾಲಕ್ಕೆ ಧರಿಸಿದ್ದ ಬಟ್ಟೆ ಮತ್ತು ದ್ವಿಚಕ್ರ ವಾಹನವನ್ನು ತೋರಿಸುವುದಾಗಿ ಹೇಳಿ ನಮ್ಮನ್ನು ಕೆಲಗೇರಿ ಹರಿಜನಕೇರಿಗೆ ಕರೆದುಕೊಂಡು ಹೋದನು. ನಾನು , ಸತೀಶ ಪಾಟೀಲ , ಮಲ್ಲೇಶಿ , ಪೊಲೀಸರು ಸೇರಿಕೊಂಡು ಪೊಲೀಸ ವಾಹನದಲ್ಲಿ ಹೋಗಿದ್ದೇವೆ. ಕೊಲೆ ಮಾಡಿದ ಮಲ್ಲೇಶಿ ಸ್ಥಳವನ್ನು ತೋರಿಸಿದ್ದಾನೆ ಮತ್ತು ಹರಿಜನಕೇರಿಯಲ್ಲಿರುವ ಒಂದು ಮನೆಯಿಂದ ಬಟ್ಟೆಗಳನ್ನು ತೆಗೆದು ಪೊಲೀಸರ ಮುಂದೆ ಹಾಜರುಪಡಿಸಿದನು. ಆತ ಒಂದು ಬಿಳಿ ಬಣ್ಣದ ಜರ್ಕಿನ , ಕಪ್ಪು ಬಣ್ಣದ ಟೀ ಶರ್ಟ ಮತ್ತು ಪ್ಯಾಂಟ ಹಾಜರುಪಡಿಸಿದ್ದಾನೆ ಮತ್ತು ಮನೆಯ ಹಿಂದೆ ಇದ್ದ ಎಚ್ ಎಫ್ ಡೀಲಕ್ಸ ಬೈಕ ನಂಃ ಕೆಎ-25-6560 ನ್ನು ಹಾಜರುಪಡಿಸಿದ್ದಾನೆ. ಪೊಲೀಸರು ಎಲ್ಲ ಬಟ್ಟೆಗಳನ್ನು ತೆಗೆದುಕೊಂಡು ಪ್ಯಾಕ ಮಾಡಿ ನಂತರ ನನ್ನ ಸಹಿ ಪಡೆದಿದ್ದಾರೆ. ಈ ಪ್ರಕ್ರೀಯೆ ನಡೆಯುವಾಗ ಮಧ್ಯಾಹ್ನ 1 ರಿಂದ 2 ಘಂಟೆ ಆಗಿರುತ್ತದೆ. ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ . ಸದರಿ ದಾಖಲೆಯನ್ನು ನಿಶಾನೆ

ಪಿ– 22 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ– 22 (ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸತೀಶ ಸಹಿ ಮಾಡಿದ್ದಾನೆ. ಆ ದಿನ ಹಾಜರುಪಡಿಸಿದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ 2 ಫೋಟೊಗಳನ್ನು ತೋರಿಸಿದ್ದು ಸಾಕ್ಷಿ ಸದರಿ ಫೋಟೊಗಳಲ್ಲಿ ತಾನು ಕಂಡುಬರುತ್ತೇನೆ ಎಂದು ನುಡಿಯುತ್ತಾರೆ ಅಲ್ಲದೇ ಸದರಿ ಫೋಟೊದಲ್ಲಿ 1 ನೇ ಆರೋಪಿಯನ್ನು ಗುರುತಿಸಿದ್ದಾರೆ. ಪಂಚನಾಮೆ ಕಾಲಕ್ಕೆ ಸದರಿ ಫೋಟೊಗಳನ್ನು ತೆಗೆದಿರುತ್ತಾರೆ. ಫೋಟೊಗಳನ್ನು ನಿಶಾನೆ ಪಿ– 23 ಮತ್ತು 24 ಎಂದು ಗುರುತಿಸಲಾಯಿತು. ನಿಶಾನೆ ಪಿ–24 ರಲ್ಲಿರುವ ಬೈಕನ್ನು ಗುರುತಿಸುತ್ತೇನೆ. ಸದರಿ ಬೈಕನ್ನು ಅದೇ ದಿನ ಜಪ್ತು ಮಾಡಲಾಗಿದೆ .

2. ಆ ದಿನ ಅಮಾನತುಪಡಿಸಿದ ಜರ್ಕಿನನ್ನು ಮುಮಾ–9 ಎಂದು , ಜರ್ಕಿನನ ಪ್ಯಾಕ ಮೇಲೆ ಸಾಕ್ಷಿಯ ಸಹಿ ಇರುವ ಚೀಟಿ ಇದ್ದು ಅದನ್ನು ಮುಮಾ–9 (ಎ) ಎಂದು ಗುರುತಿಸಲಾಯಿತು. ಆ ದಿನ ಅಮಾನತುಪಡಿಸಿದ ಟಿಶರ್ಟನ್ನು ಮುಮಾ–10 ಎಂದು , ಅದರ ಪ್ಯಾಕ ಮೇಲೆ ಸಾಕ್ಷಿಯ ಸಹಿ ಇರುವ ಚೀಟಿ ಇದ್ದು ಅದನ್ನು ಮುಮಾ–10 (ಎ) ಎಂದು ಗುರುತಿಸಲಾಯಿತು. ಆ ದಿನ ಅಮಾನತುಪಡಿಸಿದ ಪ್ಯಾಂಟನ್ನು ಮುಮಾ–11 ಎಂದು , ಅದರ ಪ್ಯಾಕ ಮೇಲೆ ಸಾಕ್ಷಿಯ ಸಹಿ ಇರುವ ಚೀಟಿ ಇದ್ದು ಅದನ್ನು ಮುಮಾ–11 (ಎ) ಎಂದು ಗುರುತಿಸಲಾಯಿತು. ಮುಮಾ–9 ರಿಂದ 11 ರ ಮೇಲೆ ಸತೀಶ ರವರು ಸಹ ಸಹಿ ಮಾಡಿದ್ದಾರೆ .

**ಪಾಟೀಸವಾಲು ಆರೋಪಿತರ ಪರ ಶ್ರೀ ಪಿ ಎಚ್ ಎಚ್ ವಕೀಲರಿಂದಃ**

ಪಾಟಿ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(**ಶ್ರೀಮತಿ ಕೆ. ಜಿ. ಶಾಂತಿ**)
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.